<u>ದಿನಾಂಕಃ **30.08.2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>

<u>ಪಾಟೀ ಸವಾಲು: **2** ನೇ ಎದುರುದಾರರ ಪರ ವಕೀಲರಾದ ಶ್ರೀ.**KRK** ರವರಿಂದಃ</u>

1) ನಾನು **5** ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಕಟ್ಟಡದ ಗುತ್ತಿಗೆದಾರನ ಕೆಲಸ ಮಾಡುತ್ತಿದ್ದೇನೆ. ನಾನು ಗುತ್ತಿಗೆದಾರನ ಕೆಲಸ ಮಾಡುತ್ತಿದ್ದೇನೆ ಎನ್ನುವ ಸಂಬಂಧ ಪರವಾನಗಿ ಇತ್ಯಾದಿ ದಾಖಲೆಗಳು ನನ್ನ ಬಳಿ ಇರುವುದಿಲ್ಲ.

2) ಗುತ್ತಿಗೆದಾರನ ಕೆಲಸದಿಂದ ನನಗೆ ಒಂದು ತಿಂಗಳಿಗೆ **75** ರಿಂದ **80** ಸಾವಿರ ರೂಪಾಯಿ ಆದಾಯ ಇದೆ. ನನ್ನ ಆದಾಯದ ಬಗ್ಗೆ ದಾಖಲೆಗಳನ್ನು ನಾನು ಹಾಜರುಪಡಿಸಿರುವುದಿಲ್ಲ. ನನ್ನ ಆದಾಯದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಾನು ಹೇಳುವಷ್ಟು ಆದಾಯವು ನನಗೆ ಇರುವುದಿಲ್ಲ ಮತ್ತು ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

3) ಅಪಘಾತವು ದಿಃ**10.01.2023** ರಂದು ಆಗಿದೆ. ಅಪಘಾತದ ಸಮಯದಲ್ಲಿ ನನ್ನ ದ್ವಿಚಕ್ರ ವಾಹನವನ್ನು ನಾನೇ ಚಾಲನೆ ಮಾಡುತ್ತಿದ್ದೆನು.

4) ಕೆಎ**-04-**ಟಿಸಿ**-10** ಸಂಖ್ಯೆಯ ವಾಹನವು ನನ್ನ ಬಲಭಾಗದಿಂದ ಬಂದು

ನನ್ನ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆಯಿತು. ಅಪಘಾತದ ಸಮಯದಲ್ಲಿ ನನ್ನ ದ್ವಿಚಕ್ರ ವಾಹನದಲ್ಲಿ ನಾನೊಬ್ಬನೇ ಇದ್ದೆನು.

5) ಅಪಘಾತದ ಸಂಬಂಧವಾಗಿ ಪೋಲಿಸರಿಗೆ ದೂರನ್ನು ನಾನೇ ಕೊಟ್ಟಿದ್ದೇನೆ. ಈಗ ಹೇಳುತ್ತೇನೆ ಫಿರ್ಯಾದನ್ನು ಓರ್ವ ಚಂದ್ರಶೇಖರ್ ಎನ್ನುವವರು ನೀಡಿದ್ದಾರೆ. ಸದರಿ ಚಂದ್ರಶೇಖರ್ ರವರು ನನಗೆ ಪರಿಚಯ ಇದ್ದಾರೆ. ನಿ.ಪಿ.**1** ರಲ್ಲಿ ಎಸ್.ಬಾಬು ರವರು ಕೆಎ-**03**-ಇಯು-**5543** ವಾಹನವನ್ನು ಚಾಲನೆ ಮಾಡಿಕೊಂಡು ಬರುತ್ತಿದ್ದರು ಮತ್ತು ಚಂದ್ರಶೇಖರ ರವರು ಹಿಂಬದಿಯ ಸವಾರ ಆಗಿದ್ದರು ಎಂದು ಬರೆಯಲಾಗಿದೆ ಎಂದರೆ ಸರಿ.

6) ಅಪಘಾತದ ಸಮಯದಲ್ಲಿ ಚಂದ್ರಶೇಖರ ರವರು ನನ್ನ ದ್ವಿಚಕ್ರ ವಾಹನವನ್ನು ಚಾಲನೆ ಮಾಡುತ್ತಿದ್ದರು ಮತ್ತು ಆತನಿಗೆ ಚಾಲನಾ ಪರವಾನಗಿ ಇರಲಿಲ್ಲ ಮತ್ತು ಆ ಕಾರಣದಿಂದ ನನ್ನನ್ನು ದ್ವಿಚಕ್ರ ವಾಹನದ ಚಾಲಕ ಎಂದು ಪ್ರಥಮ ವರ್ತಮಾನ ವರದಿಯಲ್ಲಿ ತೋರಿಸಲಾಗಿದೆ ಎಂದರೆ ಸುಳ್ಳು.

7) ಅಪಘಾತ ಆದ ದಿನವೇ ನಾನು ಆಸ್ಪತ್ರೆಗೆ ಸೇರಿದ್ದೇನೆ ಮತ್ತು **6** ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ.

8) ನಿ.ಪಿ.**4** ಎಂದು ಗುರುತು ಆಗಿರುವ ದಾಖಲೆಗಳಲ್ಲಿ ದಿ:**25.02.2023** ಎಂದು ಬರೆಯಲಾಗಿದೆ ಮತ್ತು ಆ ದಿನಾಂಕವು ಅಪಘಾತವು ಆದ ದಿನಾಂಕಕ್ಕಿಂತ ನಂತರದ ದಿನಾಂಕ ಆಗಿದೆ ಮತ್ತು ನಿ.ಪಿ.**4** ದಾಖಲೆಗಳು ಅಪಘಾತ ಆದ ಒಂದು ತಿಂಗಳ ನಂತರ ಅಸ್ತಿತ್ವಕ್ಕೆ ಬಂದ ದಾಖಲೆಗಳು ಆಗಿವೆ ಎಂದರೆ ಸುಳ್ಳು.

9) ನಾನು ಹಾಕಿರುವ ದಾಖಲೆಗಳು ಈ ಅಪಘಾತಕ್ಕೆ ಸಂಬಂಧಪಟ್ಟ ದಾಖಲೆಗಳು ಆಗಿರುವುದಿಲ್ಲ ಎಂದರೆ ಸುಳ್ಳು.

10) ನನ್ನ ಚಿಕಿತ್ಸೆಗಾಗಿ ನಾನು **2** ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇನೆ ಎನ್ನುವ ಸಂಬಂಧ ನಾನು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ನಾನು **6** ತಿಂಗಳ ಕಾಲ ಸಂಪೂರ್ಣ ವಿಶ್ರಾಂತಿ ತೆಗೆದುಕೊಳ್ಳಬೇಕು ಎಂದು ವೈದ್ಯರು ಹೇಳಿರುವ ಸಂಬಂಧ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. **Attendant charges** ಗಾಗಿ ನಾನು **1** ಲಕ್ಷ ರೂಪಾಯಿ ಖರ್ಚು ಮಾಡಿದ್ದೇನೆ ಎನ್ನುವ ಸಂಬಂಧ ನಾನು ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

11) ನನ್ನ ಮುಂದುವರಿದ ಚಿಕಿತ್ಸೆಗಾಗಿ **5** ಲಕ್ಷ ರೂಪಾಯಿಗಳು ಬೇಕಾಗಿದೆ ಎನ್ನುವ ಸಂಬಂಧ ಯಾವುದೇ ಪೂರಕವಾದ ದಾಖಲೆಗಳು ಅಥವಾ ವೈದ್ಯರ

ಸಲಹಾ ಚೀಟಿಗಳನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸುಳ್ಳು.

12) **2** ನೇ ಎದುರುದಾರರು ಕೇವಲ ಡೀಲರ್ ಆಗಿದ್ದಾರೆ ಮತ್ತು ಆ ಕಾರಣದಿಂದ ಈ ಪ್ರಕರಣಕ್ಕೂ ಮತ್ತು **2** ನೇ ಎದುರುದಾರರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸುಳ್ಳು. ನಾನು ಹೇಳಿದ ಹಾಗೆ ಯಾವುದೇ ಅಪಘಾತವು ಆಗಿಲ್ಲ ಮತ್ತು ನನಗೆ ಯಾವುದೇ ತೊಂದರೆಯು ಆಗಿರುವುದಿಲ್ಲ ಎಂದರೆ ಸುಳ್ಳು.

**<u>ಪಾಟೀ ಸವಾಲು: 1 ನೇ ಎದುರುದಾರರ ಪರವಾಗಿಃ</u>**

1 ನೇ ಎದುರುದಾರರು ಏಕ ಪಕ್ಷೀಯವಾಗಿದ್ದಾರೆ. ಆದ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಪಾಟೀ ಸವಾಲು: 3 ನೇ ಎದುರುದಾರರ ಪರ ವಕೀಲರಿಂದಃ</u>**

ಸದರಿ ಎದುರುದಾರರು ಮತ್ತು ಅವರ ಪರ ವಕೀಲರು ಹಾಜರಿಲ್ಲ. ಆದ ಕಾರಣದಿಂದ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.